## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 1788/2023 ಸಿ.ಡಬ್ಲ್ಯೂ–1 ಪಿ.ಡಬ್ಲ್ಯೂ-1

| | | |
|---|---|---|
| ಹೆಸರು | ಃ | ಶೈಲೇಶಕುಮಾರ |
| ತಂದೆಃ ಗಂಡ | ಃ | ಮಾರುತಿರಾಯ ಪಾಟೀಲ್ |
| ವಯಸ್ಸು | ಃ | ೩೪ ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು, ಪಿ.ಹೆಚ್.ಸಿ. ಕೊರಳ್ಳಿ |
| ವಾಸಸ್ಥಳ | ಃ | ಕೊರಳ್ಳಿ |

ದಿನಾಂಕಃ ೨೪.೦೨.೨೦೨೫

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-2 ರಿಂದ 11 ರವರ ಪರಿಚಯ ಇರುತ್ತದೆ.

ದಿ.27.07.2022 ರಂದು ನಾನು ಕರ್ತವ್ಯದಲ್ಲಿ ಕೊರಳ್ಳಿ ಆರೋಗ್ಯ ಕೇಂದ್ರದಲ್ಲಿದ್ದಾಗ ಸುಮಾರು ೧೧ ಗಂಟೆಗೆ ನಮ್ಮ ಸಿಬ್ಬಂದಿ ಸ್ಟಾಫ್ ನರ್ಸ ಆದ ಶ್ರೀಮತಿ ಶಾಲುಬಾಯಿ ಗಂಡ ಕಲ್ಯಾಣಿ ದೊಡ್ಮನಿ ಇವರು ನನ್ನ ಬಳಿ ರಜೆ ತೆಗೆದುಕೊಳ್ಳಲು ಬಂದಿದ್ದರು. ಆಗ ನೀವು ಪದೇ ಪದೇ ರಜೆ ಹಾಕುತ್ತಿದ್ದಿರಿ ನಿಮಗೆ ರಜೆ ಕೊಡಲು ಬರುವುದಿಲ್ಲ, ಮೇಲಾಧಿಕಾರಿಗಳಿಗೆ ತಿಳಿಸಬೇಕಾಗುತ್ತದೆ ಎಂದು ಹೇಳಿದೆನು. ಆಗ ಸದರಿ ಶಾಲುಬಾಯಿ ಯವರು ನಾನು ಪರಿಶಿಷ್ಟ ಜಾತಿಯವಳು ಇರುತ್ತೇನೆ, ನನ್ನ ಗಂಡನನ್ನು ಕರೆದುಕೊಂಡು ಬಂದು ನಿನ್ನನ್ನು ಹೊಡೆಸುತ್ತೇನೆ ಎಂದು ಭಯಪಡಿಸಿದಳು. ಅದಾದ ಐದು ನಿಮಿಷದ ನಂತರ ಅವಳ ಗಂಡ ಕಲ್ಯಾಣಿ ತಂದೆ ಶೇಖರಪ್ಪ ದೊಡ್ಮನಿ ಈತನು ಬಂದು ನನ್ನ ಓ.ಪಿ.ಡಿ. ಮುಂದೆ ನಿಂತು ರಂಡಿ ಮಗನೇ, ಬೋಸಡಿ ಮಗನೇ, ಎಂದು ಅವಾಚ್ಯ ಶಬ್ದಗಳಿಂದ ಬೈದುನು, ನಾನು ಹೊರಗಡೆ ಬಂದಾಗ ನನ್ನ ಕಾಲರ್ ಹಿಡಿದು ನಿನ್ನನ್ನು ಇವತ್ತು ಖಲಾಸ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕಿದನು. ಆಗ ಅಲ್ಲೇ ಇರುವ ನಮ್ಮ ಸಿಬ್ಬಂದಿಯಾದ ಶಾಲುಬಾಯಿ ಇವನದು ಬಹಳ ಆಗಿದೆ ಹೊಡೆದು ಖಲಾಸ ಮಾಡಿ ಎಂದು ಹೇಳಿದಳು. ಆ ಸಮಯದಲ್ಲಿ ನಮ್ಮ ಸಿಬ್ಬಂದಿಗಳಾದ, ಚಾಸಾ-೬, ೮, ಕವಿತಾಬಾಯಿ ಮತ್ತು ಅಲ್ಲಿರುವ ರೋಗಿಗಳು ಬಿಡಿಸಿದರು. ಪ್ರಕರಣವನ್ನು ದಾಖಲಿಸಿದರೆ ನಿನನ್ನು ಖಲಾಸ ಮಾಡುತ್ತೇವೆ ಮತ್ತು ನಿನ್ನ ಮೇಲೆ ಜಾತಿ ನಿಂದನೆ ಕೇಸು ಹಾಕುತ್ತೇವೆ ಎಂದು ಬೆದರಿಕೆ ಹಾಕಿದರು, ಮತ್ತು ನನ್ನ ಕರ್ತವ್ಯಕ್ಕೆ ಅಡೆ ತಡೆ ಮಾಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೇಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ